# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## Spl.C. 156/2021

**P.W.-5**
**C.W.-15**

| | | |
|---|---|---|
| ಹೆಸರು | : | ಹೆಚ್ ಎನ್ ಶಿವೇಗೌಡ |
| ತಂದೆಯ ಹೆಸರು | : | ನಂಜಲಿಂಗೇಗೌಡ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ವಿಶೇಷ ಭೂ ಸ್ವಾದೀನ ಅಧಿಕಾರಿ , ಕೆ.ಐ.ಎ.ಡಿ.ಬಿ , ಬೆಂಗಳೂರು |
| ವಾಸಸ್ಥಳ | : | ಬೆಂಗಳೂರು |

**ದಿನಾಂಕಃ 25.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

ದಿಃ 25.11.2019 ರಿಂದ ದಿಃ 11.05.2020 ರವರೆಗೆ ನಾನು ಮೈಸೂರು ಮಹಾ ನಗರ ಪಾಲಿಕೆಯ ವಲಯ 7 ರಲ್ಲಿ ವಲಯ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ 17.12.2019 ರಂದು ಮೈಸೂರು ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರು ಪತ್ರಿಸಿ , ದಿಃ 06.11.2019 ರಂದು ಉಲ್ಲೇಖ 3 ರಂತೆ ಸಲ್ಲಿಸಿದ್ದಂತಹ ವರದಿಯೊಂದಿಗೆ ಲಗತ್ತಿಸಿರುವ ಉದ್ದಿಮೆ ಪರವಾನಗೆಯಲ್ಲಿ , ಸದರಿ ಹೋಟೆಲ್ ಅಥವಾ ಉದ್ದಿಮೆಯ ಹೆಸರು ನಮೂದು ಇರುವುದಿಲ್ಲ , ಈ ಬಗ್ಗೆ ಸ್ಪಷ್ಟೀಕರಣ ನೀಡಲು ಕೋರಿದ್ದರು. ಅದರಂತೆ ನಾನು ದಿಃ 18.12.2019 ರಂದು ಪೋಲೀಸ್ ನಿರೀಕ್ಷಕರಿಗೆ ಪತ್ರಿಸಿ

**Spl.C.No.156/2021**
**P.W.-5**
**C.W.-15**

ಎರಡೂ ಉದ್ದಿಮೆಗಳು ಒಂದೇ ಕಟ್ಟಡದಲ್ಲಿದ್ದು , ಒಬ್ಬರೇ ಮಾಲೀಕರಾದ ಕಾರಣ ಒಂದೇ ಉದ್ದಿಮೆಯಲ್ಲಿ ಎರಡು ರಹದಾರಿಗಳನ್ನು ನಮೂದಿಸಿ ಪಾಲಿಕೆಯಿಂದ 2019-20 ನೇ ಸಾಲಿಗೆ ಉದ್ದಿಮೆ ಪರವಾನಗೆಯನ್ನು ನೀಡಲಾಗಿರುತ್ತದೆ ಎಂದು ಸ್ಪಷ್ಟೀಕರಣ ನೀಡಿರುತ್ತೇನೆ. ನನ್ನ ಪತ್ರದೊಂದಿಗೆ ಉದ್ದಿಮೆ ಪರವಾನೆಗೆಯ ದೃಡೀಕೃತ ಪ್ರತಿಯನ್ನು ಸಹ ಕಳುಹಿಸಿರುತ್ತೇನೆ.

3. ಈಗ ನಾನು ದಿಃ 17.12.2019 ರಂದು ಪೋಲೀಸ್ ನಿರೀಕ್ಷಕರು ಕಳುಹಿಸಿದ ಪತ್ರವನ್ನು ನೋಡುತ್ತಿದ್ದೇನೆ. ಅದನ್ನು ನಿಪಿ 28 ಎಂದು ಗುರುತುಪಡಿಸಿಕೊಳ್ಳಲಾಯಿತು. ನನ್ನ ಪತ್ರವನ್ನು ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಪತ್ರವನ್ನು ನಿಪಿ 29 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 29(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು. ಉದ್ದಿಮೆ ಪರವಾನಗೆಯ ದೃಡೀಕೃತ ಪ್ರತಿಯನ್ನು ನಿಪಿ 29(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

**ಪಾಟೀಸವಾಲುಃ ಆರೋಪಿಗಳ ಪರ ವಕೀಲರ "ಇರುವುದಿಲ್ಲ " ಎಂದಿರುತ್ತಾರೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.